

# ಔಷಧೀಯ ಗುಣಗಳ ಚೀಮುಳ್ಳು



ಅರಿಸಿನ ಬಣ್ಣದಿಂದ ಕೂಡಿದ ಉದ್ದವಾದ ಹೂಗೊಂಚಲನ್ನು ಹೊಂದಿರುವ ಚೀಮುಳ್ಳಿನ ಗಿಡ ಕಾಡಿನಲ್ಲಿದ್ದರೂ ಅಲಂಕಾರಿಕ ಸಸ್ಯವೇ ಆಗಿದ್ದು ನೋಡುಗರ ಮನಸೂರೆಗೊಳ್ಳುತ್ತದೆ.

★ ಚಿತ್ರ ಬರಹ: ಸಿ.ಎಸ್.ಸುರೇಶ್

ಈ ಮುಳ್ಳಿನ ಸಸ್ಯದ ಎಳೆಯ ಚಿಗುರನ್ನು ಕುಯ್ದು ಬಾಡಿಸಿ, ಎಳ್ಳು ಮತ್ತು ತೆಂಗಿನಕಾಯಿ ಬಳಸಿ ಚಟ್ನಿ ಮಾಡಿದಿರೆಂದರೆ ಊಟದಲ್ಲಿ ಅದರ ರುಚಿಗೆ ಬಾಯಿ ಚಪ್ಪರಿಸದವರಿಲ್ಲ. ಇದುವೇ ಚೀಮುಳ್ಳು.

ಹಲವಾರು ಔಷಧೀಯ ಗುಣಗಳಿಂದ ಹಳ್ಳಿಗಳಲ್ಲಿ ಚಿರಪರಿಚಿತವಾಗಿರುವ ಚೀಮುಳ್ಳು ತೋಟಗಳಲ್ಲಿ, ಕಾಡು ಗುಡ್ಡಗಳಲ್ಲಿ ಹಬ್ಬಿ ಬೆಳೆದಿರುವ ಮುಳ್ಳಿನ ಗಿಡಗಳಲ್ಲಿ ಒಂದು. ಹೆಸರೇ ಸೂಚಿಸುವಂತೆ ಇದು ಮುಳ್ಳುಗಳಿಂದ ಕೂಡಿರುತ್ತದೆ. ಕೆಂಜಿರೆ, ಕೆಂದಿಗೆ ಗಿಡ ಎಂಬ ಹೆಸರುಗಳೂ ಇದೆ.